## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೈಮಗ್ಗ ಮತ್ತು ಜವಳಿ ಇಲಾಖೆಯ ವಲಯ/ ವಿಭಾಗ ಮಟ್ಟದ ಜಂಟಿ ನಿರ್ದೇಶಕರ ಹುದ್ದೆಗೆ ಇಲಾಖೆಯ ಕಾರ್ಯಕ್ರಮದ ಅನುಷ್ಠಾನದ ವಿಧಾನ ಹಾಗೂ ಕರ್ತವ್ಯ ಮತ್ತು ಕಾರ್ಯಹಂಚಿಕೆಯನ್ನು ವಿನ್ಯಾಸಗೊಳಿಸಿ ತಿದ್ದುಪಡಿ ಮಾಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ವಾಕೈ 59 ಜಕೈಯೋ 2015, ದಿನಾಂಕ: 22.01.2016
2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ ಆ/ಸಿ1/12/ವ್ಯ.ನೇ/2019-20/1198, ದಿನಾಂಕ: 23.04.2019

*********

**ಪ್ರಸ್ತಾವನೆ:**

ಓದಲಾದ (1)ರ ಸರ್ಕಾರದ ಆದೇಶದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ವಲಯ/ ವಿಭಾಗ ಮಟ್ಟದ ಜಂಟಿ ನಿರ್ದೇಶಕರ ಹುದ್ದೆಯ ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಹುದ್ದೆಯ ಕಾರ್ಯವ್ಯಾಪ್ತಿ ಪ್ರದತ್ತ ಮಾಡಿರುವ ಅಧಿಕಾರಗಳು ಹಾಗೂ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದ ಕಾರ್ಯ ಹಂಚಿಕೆಯನ್ನು ಅನುಬಂಧ-1 ಮತ್ತು 2 ರಲ್ಲಿರುವಂತೆ ಹಾಗೂ ಕೆಳಗಿನ ಷರತ್ತಿಗೊಳಪಟ್ಟು ಮರು ಹಂಚಿಕೆ ಮಾಡಲಾಗಿರುತ್ತದೆ.

1. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ. 02 ಟಿಎಫ್.ಪಿ 2010 ದಿನಾಂಕ: 30.04.2010 ರ ಅನುಬಂಧದಲ್ಲಿ ನಮೂದಿಸಿರುವ ಕ್ರಮ ನಂ.1,7,8,11,12 ರ ಪ್ರಕರಣಗಳಿಗೆ ಸಂಬಂಧಿಸಿದ ಅಧಿಕಾರವನ್ನು ಚಲಾಯಿಸುವ ಮುನ್ನ ತಪ್ಪದೇ ಜವಳಿ ಅಭಿವೃದ್ಧಿ ಆಯುಕ್ತರ ಅನುಮೋದನೆಯನ್ನು ಪಡೆಯತಕ್ಕದ್ದು.
2. ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಆರ್ಥಿಕ ಅಧಿಕಾರವನ್ನು ಚಲಾಯಿಸುವ ಆದೇಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
3. ಅವಶ್ಯವಿರುವ ಪ್ರಕರಣಗಳ ಬಗ್ಗೆ ತಪ್ಪದೇ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮಗಳು 2000 ಮತ್ತು ಸುತ್ತೋಲೆಗಳ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

ಓದಲಾದ (2)ರ ಜವಳಿ ಅಭಿವೃದ್ಧಿ ಆಯುಕ್ತರ ಪತ್ರದಲ್ಲಿ ಇಲಾಖೆಯ ಯೋಜನೆಗಳಾದ ವಿದ್ಯುಚ್ಛಕ್ತಿ ರಿಯಾಯಿತಿ, ರಿಬೇಟ್ ಯೋಜನೆ, ಮಿತವ್ಯಯ ನಿಧಿ ಯೋಜನೆ ನೇಕಾರರಿಗೆ ಮರುಪಾವತಿ ಮತ್ತು ಜವಳಿ ನೀತಿಯಡಿ ರಿಯಾಯಿತಿ ಮತ್ತು ಪ್ರೋತ್ಸಾಹನಧನ ಯೋಜನೆಗಳನ್ನು ಸಕಾಲ ವ್ಯಾಪ್ತಿಗೆ ಒಳಪಡಿಸಿರುವುದರಿಂದ ಈ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ವಲಯ ಮಟ್ಟದ ಅಧಿಕಾರಿಗಳಿಗೆ ಯೋಜನೆಗಳ ಕಾರ್ಯಹಂಚಿಕೆಯಲ್ಲಿ ಬದಲಾವಣೆ ಮಾಡಬೇಕಾಗಿರುತ್ತದೆ. ಆದ್ದರಿಂದ ಸಕಾಲ ವ್ಯಾಪ್ತಿಗೆ ಒಳಪಡಿಸಲಾದ ಯೋಜನೆಗಳಿಗೆ ಸಂಬಂಧಿಸಿದಂತೆ ಜಂಟಿ ನಿರ್ದೇಶಕರ ಅಧಿಕಾರ ಪ್ರತ್ಯಾಯೋಜನೆಯ ಆದೇಶದ ಅನುಬಂಧ-2ನ್ನು ಮಾರ್ಪಾಡಿಸಿ ತಿದ್ದುಪಡಿ ಆದೇಶ ಹೊರಡಿಸುವಂತೆ ಕೋರಲಾಗಿರುತ್ತದೆ.

... 2

ಅದರಂತೆ, ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: CI 15 JAKS 2019, ಬೆಂಗಳೂರು, ದಿನಾಂಕ: 07.06.2019**

ಕೈಮಗ್ಗ ಮತ್ತು ಜವಳಿ ಇಲಾಖೆಯ ವಲಯ ಮಟ್ಟದ ಜಂಟಿ ನಿರ್ದೇಶಕರ ಹುದ್ದೆಗೆ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನದ ವಿಧಾನ ಹಾಗೂ ಕರ್ತವ್ಯ ಮತ್ತು ಕಾರ್ಯಹಂಚಿಕೆಯನ್ನು ಈ ಆದೇಶದೊಂದಿಗೆ ಲಗತ್ತಿಸಿರುವಂತೆ ಅನುಬಂಧ-2 ಕ್ಕೆ ತಿದ್ದುಪಡಿ ಮಾಡಿ ವಿನ್ಯಾಸಗೊಳಿಸಿದೆ. ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ವಾಕೈ 59 ಜಕೈಯೋ 2015, ದಿನಾಂಕ: 22.01.2016ರಲ್ಲಿನ ಅನುಬಂಧ-1 ಮತ್ತು ಅನುಬಂಧ-2 ರಲ್ಲಿನ ಕರ್ತವ್ಯ ಮತ್ತು ಜವಾಬ್ದಾರಿ ಹಾಗೂ ಇತರೆ ಷರತ್ತುಗಳು ಮುಂದುವರೆಯುತ್ತವೆ.

ಈ ಆದೇಶವನ್ನು ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. V. 7/6/19.

(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪಕಾರ್ಯದರ್ಶಿ(ಜವಳಿ)(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

7/6/19

ಗೆ:

1. ಮಹಾಲೇಖಪಾಲರು(ಲೆಕ್ಕಪತ್ರ:ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಂ.86, ಶುಭೋಧಯ ಕಾಂಪ್ಲೆಕ್ಸ್, ರೈಲ್ವೇ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.
3. ಜಂಟಿ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು/ಬೆಳಗಾವಿ/ಬಳ್ಳಾರಿ/ ತುಮಕೂರು ವಿಭಾಗ.

Commerce and Industries Department
Receipts and issue Section
Vikasa Soudha, Bangalore

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರ ಆಪ್ತ ಸಹಾಯಕರು, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-1), ವಿಧಾನಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

OK

# ಅನುಬಂಧ- 2 ಕ್ಕೆ ತಿದ್ದುಪಡಿ

## ಸರ್ಕಾರಿ ಆದೇಶ ಸಂಖ್ಯೆ: CI 15 JAKS 2019, ಬೆಂಗಳೂರು, ದಿನಾಂಕ: 07.06.2019

| ಕ್ರ. ಸಂ. | ದಿನಾಂಕ:22.01.2016ರ ಆದೇಶದ ಅನುಬಂಧ-2 ರಲ್ಲಿನ ಕ್ರಮಸಂಖ್ಯೆ | ಯೋಜನೆ/ಉಪಯೋಜನೆ | ದಿನಾಂಕ:22.01.2016ರ ಆದೇಶದ ಅನುಬಂಧ-2 ರಲ್ಲಿ ಜಂಟಿ ನಿರ್ದೇಶಕರ ವಿಭಾಗ/ವಲಯ ದಕ್ಷಿಣ ಪೂರ್ವ ಪಶ್ಚಿಮ ಹಾಗೂ ಉತ್ತರ ಇವರಿಂದ ಕಾರ್ಯಕ್ರಮದ ಅನುಷ್ಠಾನದ ವಿಧಾನ ಹಾಗೂ ಕರ್ತವ್ಯ ಮತ್ತು ಜವಾಬ್ದಾರಿ | ಈ ಆದೇಶದನ್ವಯ ಮಾಡಲಾದ ತಿದ್ದುಪಡಿ |
|---|---|---|---|---|
| 1 | 05 | ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ (20% ರಿಬೇಟ್)<br>2851-00-103-0-66-100 | ಈ ಯೋಜನೆಯಡಿ ಕೇಂದ್ರ ಕಛೇರಿಯು ನಿಗಧಿಪಡಿಸಿದ ರಿಬೇಟ್ ಅವಧಿಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲನೆ ಮತ್ತು ತ್ರೈಮಾಸಿಕ ಮಂಜೂರಾತಿ. | ಈ ಯೋಜನೆಯಡಿ ಕೇಂದ್ರ ಕಛೇರಿಯು ನಿಗಧಿಪಡಿಸಿದ ರಿಬೇಟ್‌ಗೆ ಸಂಬಂಧಿಸಿದ ಮಂಜೂರಾತಿ<br>ಅ) ರೂ.2.00 ಲಕ್ಷಗಳವರೆಗಿನ ಪ್ರಸ್ತಾವನೆಯನ್ನು ಜಿಲ್ಲಾ ಮಟ್ಟದಲ್ಲಿ.<br>ಆ) ರೂ.5.00 ಲಕ್ಷಗಳವರೆಗಿನ ಪ್ರಸ್ತಾವನೆಯನ್ನು ವಲಯ/ವಿಭಾಗದ ಜಂಟಿ ನಿರ್ದೇಶಕರ ಮಟ್ಟದಲ್ಲಿ.<br>ಇ) ರೂ.5.00 ಲಕ್ಷಗಳಗಿಂತ ಹೆಚ್ಚಿನ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಯಲ್ಲಿ ಮಂಜೂರು ಮಾಡುವುದು. |
| 2 | 06 | ಏಳಿಗೆ ನಿಧಿ ಯೋಜನೆ<br>2851-00-103-0-10-059 | ಈ ಯೋಜನೆಯಡಿ ಪ್ರಸ್ತಾವನೆಗಳನ್ನು ಪರಿಶೀಲನೆ ಮತ್ತು ತ್ರೈಮಾಸಿಕ ಮಂಜೂರಾತಿ | ಈ ಯೋಜನೆಯಡಿ ಪ್ರಸ್ತಾವನೆಗಳನ್ನು ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಪರಿಶೀಲನೆ ಮತ್ತು ತ್ರೈಮಾಸಿಕ ಮಂಜೂರಾತಿ |

...2

| | | | | |
|---|---|---|---|---|
| 3 | ಕ್ರ.ಸಂ:07<br>ಜವಳಿ ವಲಯ | 1. ವಿದ್ಯುತ್ ಸಬ್ಸಿಡಿ | ಯೋಜನೆಯ ಅನುಷ್ಠಾನದ ಬಗ್ಗೆ ಪರಿಶೀಲನೆ ಹಾಗೂ 10 ಹೆಚ್.ಪಿ. ಇಂದ 20 ಹೆಚ್.ಪಿ.ಗೆ ವರೆಗಿನ ಘಟಕಗಳಿಗೆ ಮಂಜೂರಾತಿ | ಜಿಲ್ಲಾ ಮಟ್ಟದ ಕಛೇರಿಗಳಲ್ಲಿ ಯೋಜನೆಯ ಅನುಷ್ಠಾನದ ಬಗ್ಗೆ ಪರಿಶೀಲನೆ ಹಾಗೂ 20 ಹೆಚ್.ಪಿ.ಗೆ ವರೆಗಿನ ಘಟಕಗಳಿಗೆ ವಿದ್ಯುತ್ ಸಬ್ಸಿಡಿ ಮಂಜೂರಾತಿ |
| 4 | 11 | ನೂತನ ಜವಳಿ ನೀತಿ ಅನುಷ್ಠಾನ 2852-08-202-7-01<br>ಅ) ಇತರೆ ವೆಚ್ಚ 059 | 4. ಪ್ರೋತ್ಸಾಹನ ಮತ್ತು ರಿಯಾಯತಿಗಳು :- ರೂ.1.00 ಕೋಟಿ ಯೋಜನಾ ವೆಚ್ಚದ ಘಟಕಗಳ ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರೋಢೀಕೃತ ಪಟ್ಟಿಯನ್ನು ಕೇಂದ್ರ ಕಛೇರಿಯ ಹೆಚ್‌ಒಎಸಿ (Head Office Approval Committee) ಅನುಮೋದನೆ ಪಡೆದ ನಂತರ ಮಂಜೂರಾತಿ ಹಾಗೂ ಈ ಮಿತಿಗೆ ಮೇಲ್ಪಟ್ಟ ಯೋಜನಾ ವೆಚ್ಚದ ವೆಚ್ಚದ ಘಟಕಗಳ ಪ್ರಸ್ತಾವನೆಗಳ ಪರಿಶೀಲನೆ ಮತ್ತು ಮಂಜೂರಾತಿಗೆ ಶಿಫಾರಸ್ಸು | 4. ಪ್ರೋತ್ಸಾಹನ ಮತ್ತು ರಿಯಾಯಿತಿಗಳು:-<br>ಅ) ರೂ.25.00 ಲಕ್ಷಗಳವರೆಗಿನ ಪ್ರಸ್ತಾವನೆಯನ್ನು ಜಿಲ್ಲಾ ಮಟ್ಟದಲ್ಲಿ.<br>ಆ) ರೂ.50.00 ಲಕ್ಷಗಳವರೆಗಿನ ಪ್ರಸ್ತಾವನೆಯನ್ನು ವಲಯ ಮಟ್ಟದ ಜಂಟಿ ನಿರ್ದೇಶಕರ ಮಟ್ಟದಲ್ಲಿ.<br>ಇ) ರೂ.50.00 ಲಕ್ಷಗಳಿಗಿಂತ ಹೆಚ್ಚಿನ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಯಲ್ಲಿ ಮಂಜೂರು ಮಾಡುವುದು. |

7/6/19

(ಬಿ. ವೆಂಕಟೇಶಮೂರ್ತಿ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

7/6/19